# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರ. ದಿನಾಂಕ:31-08-2016

1. .ವ್ಯವಸ್ಥಾಪಕ ನಿರ್ದೇಶಕರು,
   ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
2. ಆರ್ಥಿಕ ಸಲಹೆಗಾರರು,
   ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು,

ಮಾನ್ಯರೆ,

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕವಿಪ್ರನಿನಿ / ವಿಸಕಂಗಳ ನೌಕರರ ಪಿಂಚಣಿ ವಂತಿಕೆಗೆ ಸಂಬಂಧಿಸಿದ ಅನುಬಂಧ-4 ರ ವಿವರಗಳನ್ನು ಜುಲೈ 2016 ರ ಮಾಹೆಯಿಂದ ಆರಂಭಿಸಿ ಮುಂದಿನ ಅವಧಿಗೆ ಲೆಕ್ಕ ಘಟಕಗಳು ನೇರವಾಗಿ ತಂತ್ರಾಂಶದಲ್ಲಿ ದಾಖಲಿಸುವ ಬಗ್ಗೆ.

ಉಲ್ಲೇಖ ನಿಗಮದ ಆದೇಶದ ಸಂಖ್ಯೆ ಕವಿಪ್ರನಿನಿ / ಬಿ.93/35978/2014-15 ದಿನಾಂಕ 04-05-2015

*****

1. ಉಲ್ಲೇಖದಲ್ಲಿರುವ ನಿಗಮದ ಆದೇಶದ ಪ್ರಕಾರ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಸಂಪೂರ್ಣ ನಿರ್ವಹಣೆಯನ್ನು LIC-P&GS Unit, ಬೆಂಗಳೂರು ರವರಿಗೆ ವಹಿಸಲಾಗಿರುತ್ತದೆ.

2. ಕವಿಪ್ರನಿನಿಯ ಐಟಿ – ಎಂ ಐ ಎಸ್ ಘಟಕವು ಆನ್ ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು ಅದನ್ನು ಕವಿಪ್ರನಿನಿಯ ಇ-ಪ್ರಸರಣ ವೆಬ್ ಸೈಟ್‌ನಲ್ಲಿ ಪ್ರಕಟಿಸಲಿದೆ. ಸದರಿ ತಂತ್ರಾಂಶವನ್ನು ಉಪಯೋಗಿಸಲು ಅನುಕೂಲವಾಗುವಂತೆ ಬಳಕೆದಾರರ ಕೈಪಿಡಿಯನ್ನು(User Manual) ಸಹ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

3. ಕವಿಪ್ರನಿನಿ/ ವಿಸಕಂಗಳ ಎಲ್ಲಾ ಲೆಕ್ಕ ಘಟಕಗಳು ಜುಲೈ2016 ರಿಂದ ಪ್ರಾರಂಭಿಸಿ ಮುಂದಿನ ಅವಧಿಗೆ ಪ್ರತಿ ಮಾಹೆಯ ಅಧಿಕಾರಿ / ನೌಕರವಾರು ಪಿಂಚಣಿ ಕೊಡುಗೆ ವಿವರಗಳನ್ನು ಕಡ್ಡಾಯವಾಗಿ ಆನ್ ಲೈನ್ ತಂತ್ರಾಂಶದಲ್ಲಿ ದಾಖಲಿಸುವುದು. ಮುಂದುವರಿದು ಕಂಪನಿಯ ನಿಗಮ ಕಛೇರಿಯು ಸದರಿ ದಾಖಲಾತಿ ಬಗ್ಗೆ ಪರಿಶೀಲಿಸಲು ಕೋರಲಾಗಿದೆ.

4. ಈ ಮೇಲೆ ತಿಳಿಸಿರುವಂತೆ ಎಲ್ಲಾ ಕಂಪನಿಗಳು ಪೂರ್ಣ ಸಹಕಾರ ನೀಡಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ವಿವರಗಳನ್ನು ಸಂಪೂರ್ಣ ಗಣಕೀಕರಣಗೊಳಿಸಲು ಕೈಜೋಡಿಸಬೇಕೆಂದು ಕೋರುತ್ತೇನೆ

ತಮ್ಮ ವಿಶ್ವಾಸಿ

ನಿರ್ದೇಶಕರು
(ಆ ಮತ್ತು ಮಾ.ಸಂ)

.ಪ್ರತಿ:
ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.